ಓ ಎಸ್ ನಂ 541/2022

ಪಿ. ಡಬ್ಲ್ಯೂ ಃ 1

ದಿಃ 07.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಎಂ ಸಿ ಜೆ ವಕೀಲರಿಂದ ಃ

ನನ್ನ ವಾದಪತ್ರದಲ್ಲಿ ಹೇಳಿರುವ ಸ,ನಂ. 51/5 ರಲ್ಲಿ 24 ಗುಂಟೆ ಜಮೀನಿರುತ್ತದೆ. ಸದರಿ 24 ಗುಂಟೆ ಈಗ ನನ್ನ ಅಣ್ಣನ ಹೆಸರಿನಲ್ಲಿರುತ್ತದೆ. ನಾನು ಸ.ನಂ. 51/5 ಕ್ಕೆ ಸಂಬಂಧಿಸಿದಂತಹ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ನಾನು ದಾವಾ 5 ನೇ ಐಟಂ ಸ್ವತ್ತಿಗೆ ಸಂಬಂದಪಟ್ಟ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.ಈ ಹಿಂದೆ ದಾವಾ ಐಟಂ ನಂಬರ್ 5 ನ್ನು ರಾಜ್ ಕುಮಾರ್ ರವರಿಗೆ ನಮ್ಮ ಅಣ್ಣನೇ ಮಾರಾಟ ಮಾಡಿರುತ್ತಾರೆ. ಸದರಿ ಸ್ವತ್ತನ್ನು ನನ್ನ ಅಣ್ಣ 1972 ರಲ್ಲಿ ಮಾರಾಟ ಮಾಡಿರುತ್ತಾರೆ. ಸದರಿ 1972 ರಲ್ಲಿ ಮಾರಾಟ ಮಾಡಿರುವ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ನ್ಯಾಯಾಲಯಕ್ಕೆ ನೀಡಿರುವ ದಾಖಲಾತಿಗಳಲ್ಲಿ 1972 ರ ಕ್ರಯಪತ್ರ ಇರುವುದಿಲ್ಲ ಎಂದರೆ ನಾನು ದಾಖಲಾತಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. 1972 ರಲ್ಲಿ ಕ್ರಯವಾಗಿರುವ ಸ್ವತ್ತು ನನ್ನ ಅಣ್ಣನ ಹೆಸರಿನಲ್ಲಿ ಇದೆಯೋ ಅಥವಾ ಖರೀದಿದಾರರಾದ ರಾಜ್ ಕುಮಾರ್ ರವರ ಹೆಸರಿನಲ್ಲಿದೆಯೋ ಎಂದರೆ ಸಾಕ್ಷಿ ನಾವು ಒಟ್ಟು ಕುಟುಂಬದಲ್ಲಿ ಅನುಭವಿಸಿಕೊಂಡು ಬರುತ್ತಿದ್ದೇವು ಎಂದು ನುಡಿಯುತ್ತಾರೆ.

ಸ.ನಂ. 51/5 ರ ಪಹಣಿ ರಾಜ್ ಕುಮಾರ್ ರವರ ಹೆಸರಿನಲ್ಲಿ ಬರುತ್ತಿದೆ ಎಂದರೆ ಸುಳ್ಳು. ಸ.ನಂ. 51/5 ರ ಪಹಣಿಯನ್ನು ಹಾಜರುಪಡಿಸಲು ನನಗೆ ಏನಾದರೂ ತೊಂದರೆ ಇದೆಯೋ ಎಂದರೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು 1972 ರ ಕ್ರಯಪತ್ರವನ್ನು ಪ್ರಶ್ನೆ ಮಾಡಿರುತ್ತೇನೆ. ನಾನು ರಾಜ್‌ಕುಮಾರ್ ರವರನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ರಾಜ್‌ಕುಮಾರ್ ರವರನ್ನು ಈ ದಾವೆಯಲ್ಲಿ ಸೇರಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಸದರಿ ದಾವೆಯಲ್ಲಿ ರಾಜ್‌ಕುಮಾರ್ ರವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಮತ್ತು ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ಮತ್ತು ನನ್ನ ತಂಗಿಯರ ಮದುವೆಯನ್ನು ಪ್ರತಿವಾದಿ 1 ರವರು ಮಾಡಿರುತ್ತಾರೆ ಎಂದರೆ ಸರಿ, ದೇವಸ್ಥಾನದಲ್ಲಿ ಮಾಡಿಕೊಟ್ಟಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. 2 ನೆ ಪ್ರತಿವಾದಿ ಪ್ರತ್ಯೇಕವಾಗಿ ವಾಸವಿರುತ್ತಾರೆ ಎಂದರೆ ಸರಿ. ಪ್ರತಿವಾದಿ 2 ರವರ ಭಾಗಕ್ಕೆ ಬಂದ ಆಸ್ತಿಗಳನ್ನು

ಮುನಿರಾಜು ರವರೇ ಅನುಭವಿಸುತ್ತಿದ್ದಾರೆ ಎಂದರೆ ಸಾಕ್ಷಿ ಸರಿಯಲ್ಲ ಯಾರು ಯಾರ ಭಾಗಕ್ಕೆ ಪಡೆದುಕೊಂಡಿರುತ್ತಾರೋ ಅವರು ಜಮೀನುಗಳನ್ನು ಮಾಡಿಕೊಂಡು ಹೋಗುತ್ತಿದ್ದಾರೆ ಎಂದು ನುಡಿಯುತ್ತಾರೆ.

ದಾವಾ ಐಟಂ ನಂಬರ್ 1 ರ ಸ.ನಂ. 63/5 ರಲ್ಲಿ 22 ಗುಂಟೆ ಜಮೀನಿನಲ್ಲಿ ಕಲ್ಲು ಅಂಕಣದ ಮನೆ ಇರುತ್ತದೆ. ನಾನು ಸದರಿ ಮನೆಯ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ನಾನು ದಾವಾ ಐಟಂ ನಂಬರ್ 1 ರಲ್ಲಿ ಮನೆ ಇರುವ ಹಾಗೆ ಯಾವುದೇ ದಾಖಲಾತಿಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 1 ರಲ್ಲಿ 19 ಗುಂಟೆ ಪ್ರತಿವಾದಿ 2 ರವರು ಅನುಭವಿಸುತ್ತಿದ್ದಾರೆಂದರೆ ಸಾಕ್ಷಿ ನಾವು ಎಲ್ಲ ಒಟ್ಟು ಕುಟುಂಬ ಆ ರೀತಿಯಾಗಿ ಪ್ರತ್ಯೇಕ ಸ್ವಾಧೀನತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂಬರ್ 1 ಮತ್ತು ದಾವಾ ಐಟಂ ನಂಬರ್ 6 ರಲ್ಲಿ ಪ್ರತ್ಯೇಕ ಸ್ವಾಧೀನತೆಯನ್ನು ತೋರಿಸಲು ಪ್ರತ್ಯೇಕ ನಂಬರ್ ಆಗಿರುತ್ತದೆ ಎಂದರ ಸರಿಯಲ್ಲ.

ಸ.ನಂ. 63/5 ರಲ್ಲಿ ಇರುವ ಜಮೀನು ಪೋಡಿಯಾಗಿ ಸ.ನಂ. 63/6 ಎ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 6 ಕ್ಕೆ ಸಂಬಂದಪಟ್ಟ ಪೋಡಿ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 6 ಈಗ ನನ್ನ ಅಣ್ಣನ ಹೆಸರಿನಲ್ಲಿ ಇರುತ್ತದೆ. ಸ.ನಂ. 63/6 ಎ ನನ್ನ ತಮ್ಮ ಪ್ರತಿವಾದಿ 2 ರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸ.ನಂ. 63/6 ಎ ಕ್ಕೆ ಸಂಬಂದಿಸಿದಂತೆ ಯಾವುದೇ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸ.ನಂ. 63/6 ಎ ಈ ಹಿಂದೆ ನನ್ನ ತಾಯಿ ಮತ್ತು ಪ್ರತಿವಾದಿ 1 ರವರ ನಡುವೆ ಆಗಿರುವ ವಿಭಾಗದಲ್ಲಿ ಬಂದಿರುವ ಸ್ವತ್ತು ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ತಮ್ಮ ವಿಭಾಗ ಮಾಡಿಕೊಂಡು ಪ್ರತ್ಯೇಕ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ.

ಪ್ರತಿವಾದಿ 1 ರವರು 50 ವರ್ಷಗಳಿಂದ ಕೂಲಿ ಕೆಲಸ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಮೊದಲು ನಾವು ಕೂಲಿ ಕೆಲಸ ಮಾಡಿ ಜಮೀನನ್ನು ನೋಡಿಕೊಳ್ಳುತ್ತಿದ್ದೇವು ಎಂದು ನುಡಿಯುತ್ತಾರೆ. ನಮ್ಮ ಮದುವೆಯ ನಂತರ ನಾವು 3 ಜನ ವಾದಿಗಳು ಗಂಡನ ಮನೆಯಲ್ಲಿ ವಾಸವಾಗಿರುತ್ತೇವೆ ಎಂದರೆ ಸರಿ. ನಮ್ಮ ಮದುವೆಯ ಸಮಯದಲ್ಲಿ ನಮ್ಮ ಖರ್ಚು ವೆಚ್ಚ ಎಲ್ಲವನ್ನು ಪ್ರತಿವಾದಿ 1 ರವರೇ ನೋಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ದೇವಸ್ಥಾನದಲ್ಲಿ ನಮ್ಮ ಮದುವೆಯನ್ನು ಮಾಡಿಕೊಟ್ಟಿರುತ್ತಾರೆ. ನಮಗೆ ಏನು ತೆಗೆದುಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಮದುವೆಯಾದ ನಂತರ ಪ್ರತಿವಾದಿ 1 ಮತ್ತು 2 ರವರು ಪ್ರತ್ಯೇಕವಾಗಿ ಜಮೀನನ್ನು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿ 1 ಮತ್ತು 2 ರವರು ನಮ್ಮ ತಾಯಿಯನ್ನು 25 ವರ್ಷ ಸಾಕಿರುವುದಿಲ್ಲ, ನಾವು ಹೆಣ್ಣು ಮಕ್ಕಳೇ ನಮ್ಮ ತಾಯಿಯನ್ನು

ನೋಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಹಣೆಯದೇ ಇರುವ ಕಾರಣ ಬೇರೆ ಬೇರೆ ವಾಸವಿರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಮಾಗಡಿ**